ಆಗಬೇಕು, Lecturers ಗಳ ಸಲುವಾಗಿ ಬಹಳ ತೊಂದರೆ ಆಗಿದೆ, ಅದನ್ನು ನಾವು ಒಪ್ಪಿಕೊಳ್ಳುತ್ತೇವೆ. ಕಳೆದ ವರ್ಷ ನವೆಂಬರ್ ತಿಂಗಳವರೆಗೆ Guest Lecturers ಗಳು ಬಂದರು. ಈಗಾಗಲೇ Guest Lecturers ಗಳು ಪಾಠ ಹೇಳುವುದಕ್ಕೆ join ಆಗಿದ್ದಾರೆ. 31ನೇ ಜುಲೈ ತಿಂಗಳೊಳಗಾಗಿ ಎಲ್ಲಾ ಕಾಲೇಜುಗಳಲ್ಲಿ Guest Lecturers ಗಳು ಇರುತ್ತಾರೆ. ಕ್ರಮೇಣ KPSC ಯಿಂದ ಈ Lecturers ಗಳನ್ನು ನೇಮಕ ಮಾಡಿಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಅಧ್ಯಕ್ಷರು :– ಆಯಿತು, ಮಾನ್ಯ ಬಿ.ಆರ್. ಪಾಟೀಲ್‌ರವರು.

3. **ವಿಷಯ** : ಸರ್ಕಾರದ ವಿವಿಧ ಅಭಿವೃದ್ಧಿ ಕಾರ್ಯಕ್ರಮಗಳಿಗಾಗಿ ಭೂ ಸ್ವಾಧೀನ ಮಾಡಿಕೊಳ್ಳಲು ಪ್ರಕ್ರಿಯೆ ಪ್ರಾರಂಭವಾಗಿದ್ದು, ಕಂಪ್ಯೂಟರ್‌ಗಳ ತಾಂತ್ರಿಕ ಕಾರಣಗಳಿಂದ ಭೂ ಸ್ವಾಧೀನ ಪ್ರಕ್ರಿಯೆ ನಡೆಯದೆ ಅಭಿವೃದ್ಧಿ ಕೆಲಸಗಳು ಸ್ಥಗಿತಗೊಂಡಿರುವ ಬಗ್ಗೆ :

ಶ್ರೀ ಬಿ.ಆರ್. ಪಾಟೀಲ್ (ಆಳಂದ) :– ಮಾನ್ಯ ಅಧ್ಯಕ್ಷರೆ, ಸರ್ಕಾರದ ವಿವಿಧ ಅಭಿವೃದ್ಧಿ ಕಾರ್ಯಕ್ರಮಗಳಿಗಾಗಿ ಭೂಸ್ವಾಧೀನ ಮಾಡಿಕೊಳ್ಳಲು ಪ್ರಕ್ರಿಯೆ ಪ್ರಾರಂಭವಾಗಿದ್ದು, ಕಂಪ್ಯೂಟರ್‌ಗಳ ತಾಂತ್ರಿಕ ಕಾರಣಗಳಿಂದ ಭೂ ಸ್ವಾಧೀನ ಪ್ರಕ್ರಿಯೆ ನಡೆಯದೆ ಅಭಿವೃದ್ಧಿ ಕೆಲಸಗಳು ಸ್ಥಗಿತಗೊಂಡಿರುವ ಬಗ್ಗೆ ಮಾನ್ಯ ಕಂದಾಯ ಸಚಿವರ ಗಮನವನ್ನು ಸೆಳೆಯುತ್ತೇನೆ.

ಶ್ರೀ ವಿ. ಶ್ರೀನಿವಾಸ ಪ್ರಸಾದ್ (ಕಂದಾಯ ಸಚಿವರು) :– ಮಾನ್ಯ ಅಧ್ಯಕ್ಷರೆ, 2010–11ನೇ ಸಾಲಿನಲ್ಲಿ ತಂತ್ರಾಂಶವನ್ನು ಉಪಯೋಗಿಸಿ ಭೂಸ್ವಾಧೀನ ಪ್ರಕ್ರಿಯೆಯನ್ನು ಪ್ರಾರಂಭಿಸುವ ಸೌಲಭ್ಯವನ್ನು ರಾಜ್ಯಾದ್ಯಂತ ಜಾರಿಗೊಳಿಸಲಾಗಿದೆ. ಈ ಸೌಲಭ್ಯವನ್ನು ರಾಜ್ಯದ 52 ಸಹಾಯಕ ಆಯುಕ್ತರು ಕಛೇರಿಗಳಲ್ಲಿ ಮತ್ತು 23 ವಿಶೇಷ ಭೂಸ್ವಾಧೀನಾಧಿಕಾರಿಗಳ ಕಛೇರಿಗಳಲ್ಲಿ ಉಪಯೋಗಿಸಲಾಗುತ್ತಿದೆ.

ಈ ಸೌಲಭ್ಯದ ವಿವರಗಳು ಕೆಳಗಿನಂತಿವೆ :

- 4(1) ಅಧಿಸೂಚನೆ, 6(1) ಅಧಿಸೂಚನೆ ಹೊರಡಿಸುವುದು, 5(ಎ), ಜೆಎಂಸಿ, ಅಧಿಸೂಚನೆ ರದ್ದುಪಡಿಸುವುದು ಮತ್ತು ಅವಾರ್ಡ್ ಹಂತದವರೆಗೆ ಎಲ್ಲಾ ಹಂತಗಳನ್ನು ತಂತ್ರಾಂಶದಲ್ಲಿಯೇ ಅನುಮೋದಿಸಬಹುದು.
- ತಂತ್ರಾಂಶದಿಂದ ಹೊರಡಿಸಲಾದ ಅಧಿಸೂಚನೆ ಮಾತ್ರವೇ ಮಾನ್ಯತೆ ಪಡೆದಿರುತ್ತದೆ.

- ಭೂಸ್ವಾಧೀನಾಧಿಕಾರಿ, ಸರ್ಕಾರಿ ಮುದ್ರಣಾಲಯ, ಸಚಿವಾಲಯ, ಕಂದಾಯ ಇಲಾಖೆಯ ವಿವಿಧ ಹಂತಗಳ ಅಧಿಕಾರಿ/ಸಿಬ್ಬಂದಿಗಳಿಗೆ ಲಾಗಿನ್ ವ್ಯವಸ್ಥೆ.

ಈ ಸೌಲಭ್ಯದ ಅನುಕೂಲಗಳು ಕೆಳಗಿನಂತಿವೆ :

- ಭೂಸ್ವಾಧೀನ ಅಧಿಸೂಚನೆ ವಿವರಗಳನ್ನು ಪಹಣಿಯಲ್ಲಿ ಗೋಚರಿಸಬಹುದಾಗಿದೆ.
- ಭೂಸ್ವಾಧೀನ ಪ್ರಕ್ರಿಯೆ ಪ್ರಾರಂಭವಾಗಿರುವ ಜಮೀನಿನಲ್ಲಿ ಎಲ್ಲಾ ಮ್ಯುಟೇಷನ್ ಪ್ರಕರಣಗಳನ್ನು ಸ್ಥಗಿತಗೊಳಿಸುವುದು.
- ಭೂಸ್ವಾಧೀನ ಪ್ರಕ್ರಿಯೆಗಳ ಮಾಹಿತಿಯನ್ನು ನಿಖರವಾಗಿ ಪಹಣಿಯಲ್ಲಿ ದಾಖಲಿಸಿ ಮತ್ತು ತಪ್ಪು ಅಧಿಸೂಚನೆಗಳನ್ನು ಹೊರಡಿಸುವುದನ್ನು ತಡೆಗಟ್ಟಲಾಗಿದೆ.
- ಒಂದೇ ಜಮೀನಿನ ಮೇಲೆ ಒಂದಕ್ಕಿಂತ ಹೆಚ್ಚು ಸಾರಿ ಭೂಸ್ವಾಧೀನವಾಗುವುದನ್ನು ತಡೆಗಟ್ಟಲಾಗಿದೆ.

ಭೂಸ್ವಾಧೀನ ಪ್ರಕ್ರಿಯೆಯನ್ನು ತಂತ್ರಾಂಶದಲ್ಲಿ ನಿರ್ವಹಿಸುವಲ್ಲಿ ಸಮಸ್ಯೆಗಳು ಉಂಟಾದಲ್ಲಿ ಅವುಗಳನ್ನು ಭೂಮಿ ಉಸ್ತುವಾರಿ ಕೋಶಕ್ಕೆ ವರದಿ ಮಾಡಲಾಗುತ್ತಿದೆ. ಈ ಸಮಸ್ಯೆಗಳನ್ನು ಪರಿಶೀಲಿಸಿ ತ್ವರಿತವಾಗಿ ನಿವಾರಿಸಲಾಗುತ್ತಿವೆ. ಒಂದು ವೇಳೆ ತಾಂತ್ರಿಕ ಸಮಸ್ಯೆಗಳು ಗಂಭೀರ ಸ್ವರೂಪವಾಗಿದ್ದಲ್ಲಿ ರಾಷ್ಟ್ರೀಯ ಮಾಹಿತಿ ವಿಜ್ಞಾನ ಕೇಂದ್ರಕ್ಕೆ ಕಳುಹಿಸಲಾಗುತ್ತಿದ್ದು ಅಲ್ಲಿಂದಲೂ ಸಹ ಸಮಸ್ಯೆಗಳನ್ನು ತ್ವರಿತವಾಗಿ ಬಗೆಹರಿಸಲಾಗುತ್ತಿದೆ.

ಭೂಮಿ–ಭೂಸ್ವಾಧೀನ ಸಂಯೋಜನೆ ಪ್ರಾರಂಭಗೊಂಡ ದಿನದಿಂದ ಇಲ್ಲಿಯವರೆಗೂ ರಾಜ್ಯದಲ್ಲಿ ಒಟ್ಟು 643 4(1) ಅಧಿಸೂಚನೆಗಳು ಮತ್ತು 150 6(1) ಅಧಿಸೂಚನೆಗಳು ತಂತ್ರಾಂಶದಲ್ಲಿ ದಾಖಲಾಗಿರುತ್ತವೆ. ಭೂಮಿ–ಭೂಸ್ವಾಧೀನ ಸಂಯೋಜನೆ ಪ್ರಾರಂಭಗೊಂಡ ದಿನದಿಂದ ಇಲ್ಲಿಯವರೆಗೂ ಸುಮಾರು 53 ತಾಂತ್ರಿಕ ತೊಂದರೆಗಳನ್ನು ವರದಿ ಮಾಡಲಾಗಿದ್ದು ಇವುಗಳನ್ನು ತ್ವರಿತವಾಗಿ ನಿವಾರಿಸಲಾಗಿದೆ. ಭೂಸ್ವಾಧೀನ ಪ್ರಕ್ರಿಯೆಯನ್ನು ತಂತ್ರಾಂಶದಲ್ಲಿ ನಿರ್ವಹಿಸುವಲ್ಲಿ ತಾಂತ್ರಿಕ ಸಮಸ್ಯೆ ಬಂದಲ್ಲಿ ಭೂಮಿ ಉಸ್ತುವಾರಿ ಕೋಶದಲ್ಲಿ ಆಗಿಂದಾಗಲೇ ಬಗೆಹರಿಸಲಾಗುತ್ತಿದೆ.

ಒಂದು ವೇಳೆ ಸಿಬ್ಬಂದಿ ಅಥವಾ ಅಧಿಕಾರಿಗಳಿಗೆ ತಂತ್ರಾಂಶದ ಅರಿವಿಲ್ಲದ ಸನ್ನಿವೇಶದಲ್ಲಿ ಸದರಿಯವರು ಭೂಮಿ ಉಸ್ತುವಾರಿ ಕೋಶದಲ್ಲಿ ಮಾಹಿತಿ ಪಡೆದು ಪ್ರಕ್ರಿಯೆಯನ್ನು ಪೂರ್ಣಗೊಳಿಸುತ್ತಿದ್ದಾರೆ . ಕೆಲವೊಂದು ಸನ್ನಿವೇಶಗಳಲ್ಲಿ ಭೂಮಿ ಉಸ್ತುವಾರಿ ಕೋಶದ ಸಿಬ್ಬಂದಿಗಳೇ ಸಂಬಂಧಿಸಿದ ಭೂಸ್ವಾಧೀನ/ವಿಶೇಷ ಭೂಸ್ವಾಧೀನಾಧಿಕಾರಿಗಳ

ಕಛೇರಿಗೆ ಭೇಟಿ ನೀಡಿ ಸಿಬ್ಬಂದಿ ಮತ್ತು ಅಧಿಕಾರಿಗಳಿಗೆ ಮಾಹಿತಿ ನೀಡಿ ಪ್ರಕ್ರಿಯೆಯನ್ನು ಪೂರ್ಣಗೊಳಿಸಲಾಗುತ್ತಿದೆ. ರಾಜ್ಯದ 52 ಸಹಾಯಕ ಆಯುಕ್ತರು ಕಛೇರಿಗಳಲ್ಲಿ ಮತ್ತು 23 ವಿಶೇಷ ಭೂಸ್ವಾಧೀನಾಧಿಕಾರಿಗಳ ಕಛೇರಿಗಳಲ್ಲಿ ತಾಂತ್ರಿಕ ಕಾರಣಗಳಿಂದ ಭೂಸ್ವಾಧೀನ ಪ್ರಕ್ರಿಯೆ ನಡೆಯದೆ ಅಭಿವೃದ್ಧಿ ಕೆಲಸಗಳು ಸ್ಥಗಿತಗೊಂಡಿರುವುದಿಲ್ಲ.

ಅಧ್ಯಕ್ಷರು :– ಆಯಿತು, ಸಾಕು.

ಶ್ರೀ ಬಿ.ಆರ್. ಪಾಟೀಲ್ :– ಮಾನ್ಯ ಅಧ್ಯಕ್ಷರೆ, ಇದರಲ್ಲಿ ಬಹಳ technical problem ಇದೆ. ನಾನು ಸುಮ್ಮನೆ ಚಟಕ್ಕೋಸ್ಕರ ಮಾತನಾಡುವುದಿಲ್ಲ.

ಅಧ್ಯಕ್ಷರು :– ಮಾನ್ಯ ಪಾಟೀಲ್‌ರವರೆ, ಆ ಭಾಷೆಯನ್ನು ಬಳಸಬೇಡಿ, ಯಾರೂ ಇಲ್ಲಿ ಚಟಕ್ಕಾಗಿ ಬಂದಿಲ್ಲ. ಆ ಮಾತನ್ನು ವಾಪಸ್ಸು ತೆಗೆದುಕೊಳ್ಳಿ.

ಶ್ರೀ ಬಿ.ಆರ್.ಪಾಟೀಲ್ :– ಆಯಿತು ಸರ್, ವಾಪಸ್ಸು ತೆಗೆದುಕೊಂಡೆ. ನಾನು ಮಾತನಾಡುವಾಗ ದಯಮಾಡಿ ಮಾತನಾಡಲು ಅವಕಾಶ ಮಾಡಿಕೊಡಬೇಕು.

ಅಧ್ಯಕ್ಷರು :– ಇದು ಏಕೆ ಹೇಳುತ್ತೇನೆಂದರೆ, ಇನ್ನೂ ಚರ್ಚೆ ಮಾಡಲು ಬಹಳ ವಿಷಯಗಳು ಇವೆ.

ಶ್ರೀ ಬಿ.ಆರ್.ಪಾಟೀಲ್ :– ಸರ್, ನಾನೇನು ಮಾಡಲಿ ? ಇದು ಇಡೀ ರಾಜ್ಯದ development...

ಅಧ್ಯಕ್ಷರು :– ಆಯಿತು, ಏನು ಹೇಳುತ್ತೀರಾ ಹೇಳಿ.

ಶ್ರೀ ಬಿ.ಆರ್.ಪಾಟೀಲ್ :– ಈ ರೀತಿ ಕೋಪ ಮಾಡಿಕೊಂಡರೆ ಬೇಡ ಬಿಡಿ ಸರ್.

ಅಧ್ಯಕ್ಷರು :– ಆಯಿತು. ಮಾನ್ಯ ಸುನೀಲ್‌ಕುಮಾರ್‌ರವರು ಮಾತನಾಡುವುದು.

ಶ್ರೀ ಬಿ.ಆರ್.ಪಾಟೀಲ್ :– ರಾಜ್ಯದ ಒಂದು ಇಡೀ development, ಕಾನೂನಿನ ತೊಂದರೆಗೆ ಒಳಗಾಗಿ,....

ಅಧ್ಯಕ್ಷರು :– ನೋಡಿ, ಇದರೊಳಗೆ ಇರುವ scope ಬಹಳ limited.

ಶ್ರೀ ಬಿ.ಆರ್.ಪಾಟೀಲ್ :– ಸರ್, ಅದನ್ನು ವಿವರವಾಗಿ ಮಂತ್ರಿಗಳಿಗೆ ಹೇಳುತ್ತೇನೆ.

ಅಧ್ಯಕ್ಷರು :– ವಿವರ ಬೇಡ. ಇದರ ಬಗ್ಗೆ ನಿಮಗೆ ಏನಾದರೂ ಸಂಶಯ ಇದ್ದರೆ, ಅದರ clarification ಕೇಳಿ ಅಷ್ಟೆ.

ಶ್ರೀ ಬಿ.ಆರ್.ಪಾಟೀಲ್ :– ಈಗ ಇವರು 4(1) ನೋಟಿಸ್ ಕೊಡುತ್ತಾರೆ. 4(1) ನೋಟಿಸ್ ಕೊಟ್ಟಾಗ ತಂತ್ರಾಂಶದಲ್ಲಿ ಯಾರ ಹೆಸರಿನಲ್ಲಿ ಜಮೀನು ಇದೆ, ಅವರ ಹೆಸರಿನಲ್ಲಿ ಜಮೀನು mutation ಆಗಿರುವುದಿಲ್ಲ. ಕಾರಣ, ನಿಮಗೆ ಗೊತ್ತಿರಬೇಕು. ಅವರ ತಂದೆ ತಾಯಿ ಹೆಸರಿನಲ್ಲಿ ಜಮೀನು ಇರುತ್ತದೆ.

ಅಧ್ಯಕ್ಷರು :– ಆಯಿತು, ಇದರ ಬಗ್ಗೆ ಅರ್ಧ ಗಂಟೆ ಚರ್ಚೆಗೆ ಹಾಕಿಕೊಳ್ಳೋಣ.

ಶ್ರೀ ಬಿ.ಆರ್.ಪಾಟೀಲ್ :– ಸರ್, ಸಮಸ್ಯೆ ಇಲ್ಲೇ ಬಗೆಹರಿಸಬಹುದು. ಇದು ಬಹಳ ಸರಳವಾದಂತಹ ಸಮಸ್ಯೆ. ಅರ್ಧ ಗಂಟೆ ಚರ್ಚೆ ಮಾಡುವಂತಹ ಗಂಭೀರ ಸಮಸ್ಯೆ ಅಲ್ಲ.

ಅಧ್ಯಕ್ಷರು :– ಮಾನ್ಯ ಪಾಟೀಲ್‌ರೆ, ಈಗ ಆಗುವುದಿಲ್ಲ. ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ವಿ. ಶ್ರೀನಿವಾಸ ಪ್ರಸಾದ್ (ಮಾನ್ಯ ಕಂದಾಯ ಸಚಿವರು) :– ಸರ್ ಬಹಳ ಸ್ಪಷ್ಟವಾಗಿ ಉತ್ತರ ಇದೆ. ಅದನ್ನು ಒಂದು ಬಾರಿ ತಾವು ನೋಡಬಹುದು.

ಶ್ರೀ ಬಿ.ಆರ್.ಪಾಟೀಲ್ :– ಸರ್, mutation....

(ಗೊಂದಲ)

ಅಧ್ಯಕ್ಷರು :– ಈಗ ಚರ್ಚೆ ಮಾಡುವುದಕ್ಕೆ ಆಗುವುದಿಲ್ಲ ಮಾನ್ಯ ಪಾಟೀಲರೆ, ಇದು calling attention motion, ಇದರಲ್ಲಿ clarification limited.

ಶ್ರೀ ಬಿ.ಆರ್.ಪಾಟೀಲ್ :– ಸರ್, ನನ್ನ ಸಲಹೆ ಏನೆಂದರೆ manual ಆಗಿ ನೀವು ನೋಟಿಸ್ ಕೊಟ್ಟು....

MR. SPEAKER : Please understand the procedure.

ಶ್ರೀ ಬಿ.ಆರ್. ಪಾಟೀಲ್ :– ಕೇಂದ್ರ ಸರ್ಕಾರದ ಕೆರೆ ಯೋಜನೆಯಲ್ಲಿ ಇವತ್ತು ಜಮೀನು acquire ಆಗಿದೆ. ಅವರಿಗೆ ಜಮೀನಿಗೆ ದುಡ್ಡು ಸಿಗುತ್ತಿಲ್ಲ.

ಅಧ್ಯಕ್ಷರು :– ಬೇರೆ ರೂಪದಲ್ಲಿ ಚರ್ಚೆಗೆ ತೆಗೆದುಕೊಳ್ಳಿ. ಅವಕಾಶ ಮಾಡಿಕೊಡುತ್ತೇನೆ.

ಶ್ರೀ ಬಿ.ಆರ್.ಪಾಟೀಲ್ :- ಸರ್, ಇದು ಅರ್ಧ ಗಂಟೆ ಚರ್ಚೆ ಮಾಡುವಂತಹ ವಿಷಯ ಅಲ್ಲ.

ಅಧ್ಯಕ್ಷರು :- ಆಯಿತು, ಒಂದು ಗಂಟೆ ಸಮಯ ಬೇಕಾ ?

ಶ್ರೀ ಬಿ.ಆರ್.ಪಾಟೀಲ್ :- ಸರ್, ಎರಡು ನಿಮಿಷದಲ್ಲಿ ಇಲ್ಲೇ ಹೇಳಿಬಿಡುತ್ತೇನೆ.

ಅಧ್ಯಕ್ಷರು :- ಇಲ್ಲ, ಆಗುವುದಿಲ್ಲ.

(ಗೊಂದಲ)

ಶ್ರೀ ಬಿ.ಆರ್.ಪಾಟೀಲ್ :- ವಿಷಯಕ್ಕೆ ಸರ್ಕಾರದಿಂದ ಸರಿಯಾದ ಪರಿಹಾರ ಸಿಗುತ್ತದೆ.

MR. SPEAKER :- No, I can't break the convention and the rule.

ಶ್ರೀ ಬಿ.ಆರ್.ಪಾಟೀಲ್ :- ಸರ್, ನಾನು ಸಲಹೆ ಕೊಟ್ಟರೆ, ಸರ್ಕಾರದ ಪರಿಹಾರ ಇಲ್ಲೇ ಸಿಗುತ್ತದೆ.

ಅಧ್ಯಕ್ಷರು :- Will you please resume or not ? Please, ಇದರಲ್ಲಿ ಚರ್ಚೆಗೆ ಅವಕಾಶವಿಲ್ಲ.

ಶ್ರೀ ಬಿ.ಆರ್.ಪಾಟೀಲ್ :- Manual ಆಗಿ ಮಾಡಿದರೆ ಸಮಸ್ಯೆಗೆ ಪರಿಹಾರವಿದೆ. ತಂತ್ರಾಂಶದಲ್ಲಿ ವಾಸ್ತವಿಕ ಪರಿಸ್ಥಿತಿಯಲ್ಲಿ download ಮಾಡಿಲ್ಲ. Computer ಒಪ್ಪಿಕೊಳ್ಳುವುದಿಲ್ಲ. ಹಾಗಾಗಿ ನೋಟಿಸ್‌ಗಳು ಹೋಗುತ್ತಿಲ್ಲ. ನೋಟಿಸ್ ಹೋಗದಿದ್ದರೆ ಜಮೀನುಗಳನ್ನು ಕೊಡುವುದಿಲ್ಲ. 4(1) notification, 6(1) notification, ಮೂರು ವರ್ಷದಲ್ಲಿ ಜಮೀನು ಸ್ವಾಧೀನ final ಆಗಬೇಕು. 4(1) ಆಗದೇ ಹೋದರೆ ಮತ್ತೆ 6(1) ಆಗುವುದಿಲ್ಲ. 6(1) ಆಗದಿದ್ದರೆ ಮತ್ತೆ ಮೂರು ವರ್ಷ ಶುರು ಆಗುತ್ತದೆ. ಸರ್ಕಾರ ದುಡ್ಡನ್ನು Acquisition Officer ಹತ್ತಿರ deposit ಮಾಡಲಾಗಿದೆ ಆ ದುಡ್ಡು ಹಾಗೆಯೇ ಇದೆ. ಅಲ್ಲಿ ಜಮೀನು ಮಾಲೀಕರಿಗೆ ದುಡ್ಡು ಸಿಗುತ್ತಿಲ್ಲ. Contractors ಕೆಲಸ ಮಾಡುವುದಕ್ಕೆ ಆಗುತ್ತಿಲ್ಲ. ಗುಲ್ಬರ್ಗಾ ಇಡೀ division ನಲ್ಲಿ ಒಂದು ಕೂಡ ಭೂ ಸ್ವಾಧೀನ ಪ್ರಕ್ರಿಯೆ ಕೆಲಸ ಆಗುತ್ತಿಲ್ಲ.

ಅಧ್ಯಕ್ಷರು :- ಇವೆಲ್ಲಾ ಆಗಬಾರದೆಂದು ತಂತ್ರಾಂಶ ಬಂದಿರುವುದು.

ಶ್ರೀ ಬಿ.ಆರ್. ಪಾಟೀಲ್ :- Manual ಆಗಿ ಮಾಡಿದರೆ notice ಗಳು ಹೋಗುತ್ತವೆ. Manual ಮಾಡಿ ಇದನ್ನು accept ಮಾಡಬೇಕೆಂದು Government Press ನಲ್ಲಿಯೂ

ಕೂಡ ಸರ್ಕಾರದಿಂದ ಆದೇಶ ಕೊಡಬೇಕು. ಅದನ್ನು Government Press ನವರು ಒಪ್ಪಿಕೊಳ್ಳುತ್ತಿಲ್ಲ. Manual ಮಾಡಬೇಕು ಮತ್ತು Government Press ಗೆ ಕೂಡ ಆದೇಶ ಹೋಗಬೇಕು. Manual ಮಾಡಿರುವುದನ್ನು Gazette ನಲ್ಲಿ Publish ಮಾಡಿ ಎಂದು Government Press ನವರಿಗೆ ಆದೇಶ ಹೋಗಬೇಕು.

ಶ್ರೀ ವಿ. ಶ್ರೀನಿವಾಸ ಪ್ರಸಾದ್ :- ತಾವು ಕೊಟ್ಟಿರುವ ಸಲಹೆಗೆ ಉತ್ತರವನ್ನು ಕೊಟ್ಟಿದ್ದೇನೆ. ಕಂಪ್ಯೂಟರ್ ತಂತ್ರಾಂಶದ ಪ್ರಕಾರ ಯಾವ ರೀತಿ ಸೌಲಭ್ಯಗಳಿವೆ ಅದಕ್ಕೆ ಏನು ಮಾಡಬೇಕೆಂದು ಸ್ಪಷ್ಟವಾಗಿ ಹೇಳಿದ್ದೇನೆ.

ಶ್ರೀ ಬಿ.ಆರ್. ಪಾಟೀಲ್ :- Government Press ನವರಿಗೂ ಹೇಳಬೇಕಾಗುತ್ತದೆ. ಸರ್ಕಾರದ ಸ್ಪಷ್ಟ ಆದೇಶವಿಲ್ಲದೇ ಅವರು Gazette ನಲ್ಲಿ publish ಮಾಡುತ್ತಿಲ್ಲ.

ಶ್ರೀ ವಿ. ಶ್ರೀನಿವಾಸ ಪ್ರಸಾದ್ :- ಇದರ ಬಗ್ಗೆಯೂ ಮಾಹಿತಿಯನ್ನು ಕೊಟ್ಟಿದ್ದೇನೆ. ಇದುವೆರೆಗೂ ತಾವು ಕೊಟ್ಟಿರುವಂತಹ ಸಲಹೆಗಳನ್ನು ಪರಿಶೀಲಿಸಿ ವ್ಯವಸ್ಥೆಯಿಂದ ರೈತರಿಗೆ ಅನುಕೂಲವಾಗುವಂತಹ ರೀತಿಯಲ್ಲಿ ಮಾಡುತ್ತೇವೆ.

ಅಧ್ಯಕ್ಷರು :- ಆಯಿತು, ಅಷ್ಟು ಮಾಡಿ, ಮಾನ್ಯ ವಿ. ಸುನೀಲ್‌ಕುಮಾರ್‌ರವರು ಗಮನಸೆಳೆಯುವುದು.

4. **ವಿಷಯ :** ಸರ್ಕಾರದ ಹೊಸ ನೀತಿಯಿಂದಾಗಿ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಕೃಷಿಯೇತರ ಆಸ್ತಿಗಳ ನೋಂದಣಿಯಾಗದೇ ಸಾರ್ವಜನಿಕರಿಗೆ ತೊಂದರೆಯಾಗುತ್ತಿರುವ ಬಗ್ಗೆ.

ಶ್ರೀ ವಿ. ಸುನೀಲ್ ಕುಮಾರ್ (ಕಾರ್ಕಳ) :- ಮಾನ್ಯ ಅಧ್ಯಕ್ಷರೆ, ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕೃಷಿಯೇತರ ಆಸ್ತಿಗಳ ನೋಂದಣಿಯಾಗದೇ ತೊಂದರೆಯಾಗುತ್ತಿರುವ ಬಗ್ಗೆ ಮಾನ್ಯ ಕಂದಾಯ ಸಚಿವರ ಗಮನವನ್ನು ಸೆಳೆಯುತ್ತಿದ್ದೇನೆ.

ಶ್ರೀ ವಿ. ಶ್ರೀನಿವಾಸ ಪ್ರಸಾದ್ (ಮಾನ್ಯ ಕಂದಾಯ ಸಚಿವರು) :- ಮಾನ್ಯ ಅಧ್ಯಕ್ಷರೆ, ಮಾನ್ಯ ವಿ. ಸುನೀಲ್‌ಕುಮಾರ್‌ರವರು ಗಮನ ಸೆಳೆಯುತ್ತಿರುವ ವಿಷಯಕ್ಕೆ ಉತ್ತರ ನೀಡುತ್ತಿದ್ದೇನೆ.

ಕೃಷಿ ಭೂಮಿಯನ್ನು ಅನಧಿಕೃತ ಕೃಷಿಯೇತರ ಉದ್ದೇಶಕ್ಕಾಗಿ ಕಾನೂನು ಬಾಹಿರವಾಗಿ ತಡೆಗಟ್ಟಲು ಕಂದಾಯ ಇಲಾಖೆಯ ಸುತ್ತೋಲೆ ಸಂಖ್ಯೆ : ಕಂಇ 344 ಮುನೋಮು 2008, ದಿನಾಂಕ : 06-04-2009ರಲ್ಲಿ ನೋಂದಣಿಗೆ ಹಾಜರುಪಡಿಸುವ